ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತಾರಾಮ ಸಿದ್ದಿ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ಪ್ರಶ್ನೆಗೆ ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖಾ ಸಚಿವರ ಉತ್ತರ.

ಸೂಚನೆ:

40 ಕಿ.ಮೀ ನಡೆದು ಪಡಿತರ ಹೊರುವ ದುಧಮಾಳ ಗ್ರಾಮಸ್ಥರು, ಎಂಬ ಶೀರ್ಷಿಕೆಯಡಿ ಕೊಂಕಣ ವಾಹಿಣಿ ಪತ್ರಿಕೆಯಲ್ಲಿ ವರದಿಯಾಗಿರುವ ಕೆಲವು ಅಂಶಗಳನ್ನು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಬಜಾರಕುಣಂಗ ಗ್ರಾಮ ಪಂಚಾಯತಿ ವ್ಯಾಪ್ತಿಯ ಗಡಿಗ್ರಾಮಗಳಾದ ದುಧಮಳಾ, ದಿಗ್ಗಿ, ಬೊಂಡೇಲಿ ಸೇರಿದಂತೆ ಹಲವು ಕುಗ್ರಾಮಗಳ ಜನರು ಹೊಸ ನ್ಯಾಯಬೆಲೆ ಅಂಗಡಿ (ಪಡಿತರ ಅಂಗಡಿ) ಮಂಜೂರಾತಿಗಾಗಿ ಕಾಯುತ್ತಿದ್ದು, ಈ ಕುರಿತು ಸಲ್ಲಿಸಲಾದ ಪ್ರಸ್ತಾವನೆಯು ಬೆಂಗಳೂರಿನ ಆಹಾರ ಮತ್ತು ನಾಗರಿಕ ಪೂರೈಕೆ ಕಮಿಷನರ್ ಕಚೇರಿಯಲ್ಲಿ ಕಳೆದ ಎರಡು ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಇದರಿಂದ ಈ ಭಾಗದ ಜನ ಇಂದಿಗೂ 40 ಕಿ.ಮೀ. ದೂರ ನಡೆದುಕೊಂಡು ಕಾಡಿನ ಮಧ್ಯೆ ಪ್ರಾಣಿಗಳ ಭಯದಲ್ಲಿ ಪಡಿತರ ಸಾಮಗ್ರಿಗಳನ್ನು ಹೊತ್ತು ಸಾಗಿಸುವ ಅನಿವಾರ್ಯತೆ ಮುಂದುವರಿದಿದೆ. ಜಿಲ್ಲಾಧಿಕಾರಿಗಳೇ ನೀಡಿದ ಭರವಸೆ ಈಡೇರಿಲ್ಲ, ಬಡಜನರಿಗೆ ಪಡಿತರ ಹೊತ್ತು ಸಾಗಿಸುವ ಕಷ್ಟ ಇನ್ನು ತಪ್ಪಿಲ್ಲ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿರುವುದು ಪತ್ರಿಕೆಯಲ್ಲಿ ವರದಿಯಾಗಿರುತ್ತದೆ.

ಹೀಗಾಗಿ ಸದರಿ ಸಾರ್ವಜನಿಕ ಮಹತ್ವದ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಬೇಕು ಮತ್ತು ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರುಆದ್ಯತೆಯ ಮೇರೆಗೆ ನ್ಯಾಯಬೆಲೆ ಅಂಗಡಿಯನ್ನು ಪ್ರಾರಂಭಿಸಬೇಕೆಂದು ಸದನದ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುತ್ತೇನೆ.

ಉತ್ತರ:

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಬಜಾರಕುಣಂಗ ಗ್ರಾಮದ ಪಂಚಾಯತಿ ವ್ಯಾಪ್ತಿಯ ಗಡಿ ಗ್ರಾಮಗಳಾದ ದೂಧಮಳಾ, ಡಿಗ್ಗಿ, ಬೊಂಡೇಲಿ ಗ್ರಾಮಗಳ ಪಡಿತರ ಚೀಟಿದಾರರಿಗೆ ಅನುಕೂಲವಾಗುವಂತೆ ಬಜಾರಕುಣಂಗ ಗ್ರಾಮದಲ್ಲಿ ಉಪಕೇಂದ್ರ ತೆರೆದು ಸಿ ವೈ ದೇಸಾಯಿ ನ್ಯಾಯಬೆಲೆ ಅಂಗಡಿ ಸಂಖ್ಯೆ 14 ಕರಾಳಿ ನೇದರ ಮೂಲಕ ಪಡಿತರ ವಿತರಿಸಲಾಗುತ್ತಿದೆ ಹಾಗೂ ಹೊಸದಾಗಿ ನ್ಯಾಯಬೆಲೆ ಅಂಗಡಿ ಮಂಜೂರಾತಿ ಬಗ್ಗೆ ನಿಯಮಾನುಸಾರ ಪ್ರಸ್ತಾವನೆಯನ್ನು ಜಿಲ್ಲೆಯಿಂದ ಪಡೆದು ಅಗತ್ಯ ಕ್ರಮವಹಿಸಲಾಗುವುದು.

ಸಂಖ್ಯೆ: ಇ-ಆನಾಸ 119 ಆನಾಸ 2025

(ಕೆ.ಹೆಚ್ ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು
ಮಾಪನಶಾಸ್ತ್ರ ಇಲಾಖಾ ಸಚಿವರು